


### ಮಾಹಿತಿಪೂರ್ಣ

'ಬಾಡಿಗೆ ತಾಯಿ ಬಜಾರ್ ಬಂದ್?', ಸುಧಾ ಹೆಗಡೆ ಅವರ ಮುಖಪುಟ ಲೇಖನ (ಸುಧಾ, ಸೆ. 22) ಮಾಹಿತಿಪೂರ್ಣವಾಗಿದೆ. ಬಾಡಿಗೆ ತಾಯ್ತನ ವಿಷಯದಲ್ಲಿ ತುಂಬ ಅವ್ಯವಹಾರಗಳು ನಡೆದಿದ್ದು, ಇದನ್ನು ಕಾನೂನು ತಡೆಗಟ್ಟಿದೆ.

–ಶ್ಯಾಮಸುಂದರ ಶೆಟ್ಟಿ ಉಡುಪಿ, ಸಿಪಿಕೆ ಮೈಸೂರು,
ಮಧುರಾ ಸುಬ್ರಹ್ಮಣ್ಯ, ಬೆಂಗಳೂರು,
ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

### ಬದಲೀ ತಾಯ್ತನ

ತನ್ನ ಮಗುವನ್ನು ಬೇರೆ ಹೆಣ್ಣಿನ ಗರ್ಭಕೋಶದಲ್ಲಿ ಬೆಳೆಸಲು ಬಾಡಿಗೆ ಕೊಡಬಾರದು, ಪಡೆಯಲೂ ಬಾರದು ಎಂದು ಕಾನೂನು ಹೇಳಿದೆ. ಹಾಗಿರುವಾಗ ಈ ಬದಲಿ ಪ್ರಕ್ರಿಯೆಗೆ 'ಬದಲೀ ತಾಯ್ತನ' ಎನ್ನಬೇಕೆ ಹೊರತು 'ಬಾಡಿಗೆ ತಾಯ್ತನ' ಎನ್ನಬಾರದು.

–ಡಾ. ಲೀಲಾವತಿ ದೇವದಾಸ್ ಬೆಂಗಳೂರು

### ಉಪಯುಕ್ತ ಬರಹ

ವಿಚಾರ ಲಹರಿಯಲ್ಲಿ (ತೋಷ) 'ವಿಪರ್ಯಾಸಗಳ ಅರಿವು' ಬರಹ ಈಗಿನ ಕೃಷಿಕರಿಗೆ ಉತ್ತಮ ಮಾರ್ಗದರ್ಶನ ನೀಡಿದೆ.

–ಗಾಣದಾಳು ರಾಮಣ್ಣ ಚಿತ್ರದುರ್ಗ, ಮಹಾವೀರ ಕಾಸರ ಶಿವಮೊಗ್ಗ

### ಪಿಂಗಾಣಿ ಲೋಕ

ಪಿಂಗಾಣಿಯ ಅಪೂರ್ವ ಕಲಾ ಲೋಕ (ಸೀಮಾ ಕಾರಟಗಿ) ಚಿತ್ರ ಲೇಖನ ಚೆನ್ನಾಗಿದೆ.

–ಮಹಾದೇವಿ ಟೀಚರ ಶಿವಮೊಗ್ಗ

### ಪ್ರವಾಸ ಲೇಖನ

ಭಂಡಾರ್ದಾರ (ರಮಣಶೆಟ್ಟಿ ರೆಂಜಾಳ) ಪ್ರವಾಸ ಲೇಖನ ಆಕರ್ಷಕವಾಗಿದೆ. ಚಿತ್ರಗಳೂ ಮನಸೆಳೆಯುವಂತಿವೆ.

–ಎಚ್.ಆನಂದಕುಮಾರ್ ಚಿತ್ರದುರ್ಗ

### ಬಳೆ ಸಂಸ್ಕೃತಿ

ಕೈಬಳೆ ನಾದಕೆ (ಎಸ್ಲೆಚ್) ಬರಹ ಸಂಸ್ಕೃತಿಯ ಬಗ್ಗೆ ಬೆಳಕು ಚೆಲ್ಲಿದೆ. ಬಳೆ ಮತ್ತು ಸುಮಂಗಲಿಯರು ಭಾರತೀಯ ಸಂಸ್ಕೃತಿಯೊಂದಿಗೆ ಬಾಂಧವ್ಯ ಬೆಸೆದುಕೊಂಡಿರುವುದು ಈ ದೇಶದ ವೈಶಿಷ್ಟ್ಯ.

–ಕೋಟೇಶ್ವರ ಸೂರ್ಯನಾರಾಯಣರಾವ್ ಬೆಂಗಳೂರು

### ಹೊಂದಾಣಿಕೆ, ತಾಳ್ಮೆ ಮುಖ್ಯ

'ಹಿರಿಯ ನಾಗರಿಕರಿಗೆ ಒಂದಿಷ್ಟು ಸಲಹೆಗಳು' (ನಾರಾಯಣ ಯಾಜಿ ಶಿರಾಲಿ) ಬರಹ ಮಾಹಿತಿಪೂರ್ಣವಾಗಿದ್ದು, ವೃದ್ಧರು ಗಮನದಲ್ಲಿಟ್ಟು ಕೊಳ್ಳಬೇಕಾದ ಅಂಶ ಹಿತಕಾರಿ ಎನಿಸಿದೆ.

–ಕೆ.ಜಿ. ಶೇಖರಪ್ಪ ಅರಸೀಕೆರೆ, ರಾಜಶೇಖರ ಹಾದಿಮನಿ ಧಾರವಾಡ,
ಮೇ.ಗೋ.ಸುಬ್ಬಣ್ಣ ಮೇಗರವಳ್ಳಿ

### ಆಶಾ ದಿಟ್ಟ ಹೆಜ್ಜೆ

'ಸೆಲೆಬ್ರಿಟಿ'ಯಲ್ಲಿ 'ಸುದೀರ್ಘ ಧ್ವನಿ ಪಯಣ' (ಹನಿ) ಬರಹ ಚೆನ್ನಾಗಿದೆ. ಹೆಸರಾಂತ ಗಾಯಕಿ ಆಶಾ ಭೋಸ್ಲೆ ಇಟ್ಟ ದಿಟ್ಟ ಹೆಜ್ಜೆ ಮೆಚ್ಚುವಂಥದ್ದು.

–ಎಚ್.ಆರ್ ದೇಸಾಯಿ ರಾಯಚೂರು, ಸುಂದರ್ ಬೆಂಗಳೂರು,
ಎಸ್.ಲಕ್ಷ್ಮೀನರಸಿಂಹ ಚಾಮರಾಜನಗರ, ನಾರಾಯಣಯಾಜಿ ಶಿರಾಲಿ

### ಕಾದಂಬರಿ ಆರಂಭವೇ ಕುತೂಹಲಕಾರಿ

'ಇರುವುದೆಲ್ಲವ ಬಿಟ್ಟು', ಗೀತಾ ಬಿ.ಯು. ಅವರ ಕಾದಂಬರಿ ಆರಂಭವೇ ಕುತೂಹಲಕಾರಿಯಾಗಿದೆ.

–ಬಿ.ಎಸ್. ರಮೇಶ್ ಬೆಂಗಳೂರು

### ಸಾರ್ವಕಾಲಿಕ ಸತ್ಯ

ಬಾಲಿವುಡ್ ಅಂಕಣದಲ್ಲಿ 'ರೇಖಾ ಹೇಳಿದ ಸತ್ಯ..' (ಅಮಿ) ಮಾಹಿತಿಯಲ್ಲಿ ತಿದ್ದುಪಡಿ ಇದೆ. ಅಮಿತಾಭ್– ರೇಖಾ ಪ್ರಣಯ ಪ್ರಕರಣ ಪ್ರಾರಂಭವಾಗುವ ಮೊದಲೇ ಅಮಿತಾಭ್– ಜಯಾರ ಮದುವೆಯಾಗಿತ್ತು. 'ಮುಖದ್ದರ ಕಾ ಸಿಕಂದರ'ನಲ್ಲಿ ಅವರಿಬ್ಬರ ಮಧ್ಯೆ ಗಾಢ ಅನುರಕ್ತದ ಸನ್ನಿವೇಶವೇ ಇರಲಿಲ್ಲ. ಅವರ ಪ್ರಣಯಲೀಲೆ ಆಧರಿಸಿ ಯಶ ಛೋಪ್ರಾ ನಿರ್ಮಿಸಿದ 'ಸಿಲ್‌ಸಿಲಾ'ದಲ್ಲಿ ಮಾತ್ರ ಗಾಢಾನುರಕ್ತದ ಸನ್ನಿವೇಶ ಇದ್ದದ್ದು ಸತ್ಯ. ಅಮಿತಾಭ್–ರೇಖಾ ಜೋಡಿಗಿಂತಲೂ ಬಹಳ ಹಿಂದೆ ರಾಜಕಪೂರ್–ನರ್ಗಿಸ್ ಹಾಗೂ ದೇವಾನಂದ–ಸುರಯ್ಯಾ ಜೋಡಿ ಹಿಂದಿ ಚಿತ್ರದ ಸರ್ವಕಾಲಿಕ ಅತಿ ಪ್ರಸಿದ್ಧ ಜೋಡಿಗಳಾಗಿದ್ದದ್ದು ಅನೇಕರಿಗೆ ತಿಳಿದಿರಲಿಕ್ಕಿಲ್ಲ.

–ಗೋಪಾಲ ಆಶ್ರಿತ ಬೆಂಗಳೂರು

